ಅಸಲು ದಾವೆ ಸಂಖ್ಯೆ - 211/2015
ಡಿ.ಡಬ್ಲ್ಯೂ - 01
ದಿನಾಂಕಃ 07-12-2024
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಡಿ.ಎಂ ವಕೀಲರಿಂದ**

ನಾನು 3 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ, ಓದಲು ಮತ್ತು ಬರೆಯಲು ಬರುವುದಿಲ್ಲ. ಈ ದಾವೆಯನ್ನು ಯಾರು ಯಾರ ಮೇಲೆ ಹೂಡಿದ್ದಾರೆ ಎಂದು ನಿಮಗೇನಾದರು

ಮಾಹಿತಿ ಇದೆಯಾ ಎಂದರೆ ಖಲೀಲ್ ಅಹ್ಮದ್ ಮತ್ತು ಅವರ ಅಣ್ಣ ತಮ್ಮಂದಿರು ನಮ್ಮ ತಂದೆಯ ವಿರುದ್ಧ ದಾವೆಯನ್ನು ಹೂಡಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ವಾದಿಯು ಈ ದಾವೆಯನ್ನು ಯಾವ ಆಸ್ತಿಗೆ ಸಂಬಂಧಪಟ್ಟಂತೆ ಮತ್ತು ಏನು ಮಾಗಣಿ ಕೇಳಿದ್ದಾರೆ ಎಂದು ನೀವೇನಾದರು ನಿಮ್ಮ ವಕೀಲರ ಮುಖಾಂತರ ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿರುವುದಿಲ್ಲ. ಲಾಲಶಾಗಕಟ್ಟಾ ಗಲ್ಲಿಯ ಸಿದ್ದಲಿಂಗೇಶ್ವರ ಟಾಕೀಜ್ ಹತ್ತಿರ ಇರುವ ವಾರ್ಡ ನಂಬರ 4 ನಲ್ಲಿರುವ ಟಿ.ಎಂ.ಸಿ ಆಸ್ತಿ ನಂಬರ 210 ನಿಮ್ಮ ತಂದೆಯ ಘರಾಣೆದ ಆಸ್ತಿ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸವಣೂರ ಟಿ.ಎಂ.ಸಿ ಹದ್ದಿನಲ್ಲಿರುವ ಪಶ್ಚಿಮಕ್ಕೆ ಬಟ್ಟೆವಾಲೆರವರ ಆಸ್ತಿ, ಪೂರ್ವಕ್ಕೆ ರಸ್ತೆ, ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ ಆಸ್ತಿ ನಂಬರ 226 ರ ಮಧ್ಯ ಇರುವ ಆಸ್ತಿಯು ಟಿ.ಎಂ.ಸಿ ಆಸ್ತಿ ನಂಬರ 227 ಇರುತ್ತದೆ ಎಂದರೆ ಸರಿ.

ಟಿ.ಎಂ.ಸಿ ಆಸ್ತಿ ನಂಬರ 227 ವಾದಿಯರ ತಂದೆಯಾದ ಉಮರಸಾಬರವರು ತಮ್ಮ ತಾಯಿಯ ತಾಯಿಯಾದ ಮೋದಿನಬಿರವರಿಂದ ಖರೀದಿ ಹಿಡಿದ ಆಸ್ತಿ ಎಂದರೆ ಸರಿಯಲ್ಲ. ಆಸ್ತಿ ನಂಬರ 227 ಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಏನಾದರು ನೀವು ಪರಿಶೀಲಿಸಿದ್ದೀರಾ ಎಂದರೆ ಪರಿಶೀಲಿಸಿರುವುದಿಲ್ಲ. ಸದರಿ ಆಸ್ತಿಯು ಮೂಲತಃ ವಾದಿಯರ ತಂದೆಯಾದ ಉಮರಸಾಬರವರ ಆಸ್ತಿಯಾಗಿದ್ದು, ಅವರು ಪೋತಿಯಾದ ನಂತರ ವಾರಸಾ ನಾತೆಯಿಂದ ವಾದಿಯರ ಹೆಸರಿಗೆ ಸದರಿ ಆಸ್ತಿಯ ಖಾತೆಯು ದಾಖಲಾಗಿದ್ದು, ಟಿ.ಎಂ.ಸಿ ಸವಣೂರಿನಿಂದ ದಾಖಲಾದ ಖಾತಾ ದಾಖಲೆಯನ್ನು ವಾದಿಯರು ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಆಸ್ತಿ ನಂಬರ 227 ಮೂಲತಃ ಯಾರ ಆಸ್ತಿ ಎಂದರೆ ಆಸ್ತಿ ನಂಬರ 227/1 ನಮ್ಮ ತಂದೆಯವರ ಆಸ್ತಿ. ಸದರಿ ಆಸ್ತಿ ನಂಬರ 227/1 ರ ನಿಮ್ಮ ತಂದೆಗೆ ಹೇಗೆ ಬಂದಿತು ಎಂದರೆ ನನಗೆ ಹೇಳಲು ಆಗುವುದಿಲ್ಲ. ಆಸ್ತಿ ನಂಬರ 227/1 ಕ್ಕೆ ಸಂಬಂಧಪಟ್ಟಂತೆ ಯಾವುದಾದರು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ನಮ್ಮ ತಂದೆಯವರು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ನಿಮ್ಮ ತಂದೆಯವರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿದ್ದೀರಾ ಎಂದರೆ ವಕೀಲರ ಮುಖಾಂತರ ನಾನು ತಿಳಿದುಕೊಂಡು ಉತಾರಗಳನ್ನು ಪರಿಶೀಲಿಸಿದ್ದೇನೆ. ಮುಂದುವರೆದು ಯಾವ್ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನನ್ನ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ.

ಆಸ್ತಿ ನಂಬರ 227/1 ಕ್ಕೆ ಸಂಬಂಧಪಟ್ಟಂತೆ ನಿಮ್ಮ ತಂದೆಯಾಗಲಿ ಅಥವಾ ನೀವಾಗಲಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ವಸ್ತುಸ್ಥಿತಿಯಲ್ಲಿ ಆಸ್ತಿ ನಂಬರ 227/1 ಅಸ್ತಿತ್ವದಲ್ಲಿ ಇರುವುದೇ ಇಲ್ಲ ಎಂದರೆ ಸರಿಯಲ್ಲ. ಆಸ್ತಿ ನಂಬರ 227/1 ರ ಚೆಕ್ಕುಬಂದಿ ಹೇಳಲು ಆಗುತ್ತದೆಯಾ ಎಂದರೆ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಯಲ್ಲಪ್ಪನವರ ಆಸ್ತಿ, ಉತ್ತರಕ್ಕೆ ಖಲೀಲ್ ರವರ ಆಸ್ತಿ, ದಕ್ಷಿಣಕ್ಕೆ ರಸ್ತೆ ಇರುತ್ತದೆ. ನೀವು ಹೇಳಿದ ಚೆಕ್ಕುಬಂದಿ ಮಧ್ಯದಲ್ಲಿರುವ ಆಸ್ತಿ ನಂಬರ 227 ಇರುತ್ತದೆ ಎಂದರೆ ಸರಿಯಲ್ಲ. ಮುಂದುವರೆದು ಆಸ್ತಿ ನಂಬರ 227/1 ಇರುತ್ತದೆ.

1960 ರಲ್ಲಿ ಉಮರಸಾಬರವರು ಆಸ್ತಿ ನಂಬರ 227 ಅನ್ನು ಖರೀದಿ ಹಿಡಿದಾಗಿನಿಂದ ಇಲ್ಲಿಯವರೆಗು ದಾಖಲೆಗಳಲ್ಲಿ ಭಾಗ/ಪೋಡಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ಬಗ್ಗೆ ನಮಗೆ ಗೊತ್ತಿರುವುದಿಲ್ಲ. ನಿಮ್ಮ ತಂದೆಯವರ ಆಸ್ತಿಯಾದ ಆಸ್ತಿ ನಂಬರ 210 ಶಿಥೀಲಗೊಂಡಿದ್ದರಿಂದ ನಿಮ್ಮ ತಂದೆಯವರು ವಾದಿಯರೊಂದಿಗೆ ಮಾತನಾಡಿ ಆಸ್ತಿ ನಂಬರ 227 ರಲ್ಲಿ ತಾತ್ಕಾಲಿಕವಾಗಿ ಪರವಾನಿಗೆ ಪಡೆದು ಇದ್ದರು ಎಂದರೆ ಸರಿಯಲ್ಲ. ವಾದಿಯರು ನಿಮ್ಮ ತಂದೆಗೆ ಹಲವಾರು ಬಾರಿ ತಮ್ಮ ಆಸ್ತಿ ನಂಬರ 227 ಯನ್ನು ಖಾಲಿ ಮಾಡಿ ಕೊಡುವಂತೆ ಕೇಳಿಕೊಂಡರು, ನಿಮ್ಮ ತಂದೆಯವರು ಕೊಟ್ಟಿರುವುದಿಲ್ಲ ಎಂದರೆ ಅದು ನಮ್ಮ ಆಸ್ತಿ ಇರುತ್ತದೆ ಆದ್ದರಿಂದ ನಮ್ಮ ತಂದೆಯವರು ಖಾಲಿ ಮಾಡಿ ಕೊಟ್ಟಿರುವುದಿಲ್ಲ.

ಆಸ್ತಿ ನಂಬರ 227 ಅನ್ನು ನಿಮ್ಮ ತಂದೆಯವರು ಖಾಲಿ ಮಾಡದೇ ಇದ್ದ ಕಾರಣ 2 ನೇ ವಾದಿಯು ದಿನಾಂಕ 01-07-2015 ರಂದು ಪ್ರಶಾಂತ ಎಸ್. ಯಲಗಾರ ವಕೀಲರ ಮುಖಾಂತರ ನಿಮ್ಮ ತಂದೆಗೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿಗೆ ನಿಪಿ.7 ಮತ್ತು ನಿಪಿ.8 ಅನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಪರಿಶೀಲಿಸಿ ಸದರಿ ಆಸ್ತಿಯು ಖಾಲಿ ಇರುತ್ತದೆ, ಆ ಆಸ್ತಿಯ ಹಿಂದೆ ಸಾಕ್ಷಿಯ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ.9 ಅನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಪರಿಶೀಲಿಸಿ ಸದರಿ ಭಾವಚಿತ್ರದಲ್ಲಿರುವ ಗೋಡೆಗೆ ಸಾಕ್ಷಿಯ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಗೋಡೆಗೆ ಸಂಬಂಧಪಟ್ಟ ಆಸ್ತಿಯೇ ವಾದಿಯರ ಆಸ್ತಿ ನಂಬರ 227 ಇರುತ್ತದೆ ಎಂದರೆ ಸರಿಯಲ್ಲ.

ನೀವು ಸಲ್ಲಿಸಿದ ನಿಡಿ.2 ಮತ್ತು ನಿಡಿ.3 ರ ಅಸಲು ದಾವಾ ಸಂಖ್ಯೆ 80/1965 ಆಸ್ತಿ ನಂಬರ 227 ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಸಲ್ಲಿಸಿದ ದಾಖಲೆಗಳ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಉತಾರಗಳ ಬಗ್ಗೆ ಮಾಹಿತಿ ಇರುತ್ತದೆ. ಆದರೆ ನ್ಯಾಯಾಲಯದಲ್ಲಿ ಆದ ಆದೇಶಗಳ ಬಗ್ಗೆ ಮಾಹಿತಿ ಇರುವುದಿಲ್ಲ. ನಿಡಿ.8 ರಲ್ಲಿ ವಾದಿಯರನ್ನಾಗಲಿ, ವಾದಿಯ ತಂದೆಯನ್ನಾಗಲಿ ಪಕ್ಷಗಾರರು ಮಾಡಿರುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯರು ನಿಮಗೆ ಪರವಾನಿಗೆ ಮೇರೆಗೆ ನೀಡಿದ ಆಸ್ತಿಯ ಪರವಾನಿಗೆ ರದ್ದು ಮಾಡಿ ಸದರಿ ಜಾಗವನ್ನು ಖಾಲಿ ಮಾಡಿ ಖುಲ್ಲಾ ಜಾಗ ಕೊಡಿ ಎಂದು ನೋಟೀಸನ್ನು ನೀಡಿದಾಗಲೂ ಸಹ ನಿಡಿ.1 ರಂತೆ ದಾಖಲೆಯನ್ನು ಸೃಷ್ಟಿಸಿಕೊಂಡು ಸದರಿ ಆಸ್ತಿಯು ನಿಮ್ಮ ತಂದೆಯವರ ಆಸ್ತಿ ಎಂದು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ನಿಮ್ಮ ತಂದೆಯ ಹೆಸರು ಯಾವ ದಾಖಲೆಗಳ ಆಧಾರದ ಮೇಲೆ ಬಂದಿತು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ನಮ್ಮ ತಂದೆಗೆ ಹೇಗೆ ಬಂದಿತು ಎಂದು ನನಗೆ ಗೊತ್ತಿಲ್ಲ ಆದರೆ ನನಗೆ ನನ್ನ ತಂದೆಯ ಮುಖಾಂತರ ಬಂದಿರುತ್ತದೆ.

ವಾದಿಯರ ಆಸ್ತಿಯಾದ 227 ಅನ್ನು ಕಬಳಿಸುವ ಉದ್ದೇಶದಿಂದ ಟಿ.ಎಂ.ಸಿ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ನಿಡಿ.1 ಅನ್ನು ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ವಾದಿಯರ ಆಸ್ತಿಯನ್ನು ಖಾಲಿ ಮಾಡಿ ಕೊಡದೇ ಇದ್ದಿದ್ದಕ್ಕೆ, ವಾದಿಯರು ಆಸ್ತಿಯ ಕಬ್ಜಾವನ್ನು ಕೋರಿ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವೆ ದಾಖಲಾದ ನಂತರ ನಿಮ್ಮ ತಂದೆಯವರು ನಿಡಿ.1 ರಂತೆ ಖೊಟ್ಟಿ ದಾಖಲೆಯನ್ನು ಸೃಷ್ಟಿಸಿಕೊಂಡು ನಂತರ ನಿಮ್ಮ ಹೆಸರಿಗೆ ಬಕ್ಷಿಸ ಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.1 ಮತ್ತು ನಿಡಿ 9 ರಂತೆ ಆಸ್ತಿ ನಂಬರ 227/1 ವಸ್ತುಸ್ಥಿತಿಯಲ್ಲಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 9 ರಲ್ಲಿ ನೀವು ತೋರಿಸಿರುವ ಚೆಕ್ಕಬಂದಿ ಅಸ್ತಿಯು ವಾದಿಯರ ಆಸ್ತಿ ನಂಬರ 227 ರ ಚೆಕ್ಕುಬಂದಿ ಇರುತ್ತದೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.